# ಆಹಾ ಸುದ್ದಿ!

★ ಬಿಂದು



ಸ್ಟಫರ್ಡ್ ಶೈರ್‌ನ ಈ ಪುಟ್ಟ ನಾಯಿಮರಿ ಹಸಿವೆ ಹೆಚ್ಚಾಗಿ ಅಡುಗೆ ಮನೆಯಲ್ಲಿ ಇದ್ದ ಎಂಟು ಇಂಚು ಉದ್ದದ ಚೂರಿಯೊಂದನ್ನು ನುಂಗಿಬಿಟ್ಟಿತಂತೆ! ಸ್ವಲ್ಪ ಹೊತ್ತಿನ ಬಳಿಕ ವಿಲವಿಲನೆ ಒದ್ದಾಡಿ ಮೂಗಿನಲ್ಲಿ ರಕ್ತ ಬರುವುದನ್ನು ನೋಡಿ ಮಾಲಕಿ ಆಸ್ಪತ್ರೆಗೆ ಧಾವಿಸಿದಳು. ಅಲ್ಲಿ ಆಪರೇಷನ್ ಮಾಡಿ ಚಾಕುವನ್ನು ಹೊರತೆಗೆಯಲಾಯಿತು. ನಾಯಿಮರಿ ಈಗ ಖುಷಿಯಿಂದ ಓಡಾಡುತ್ತಿದೆ. 'ಚಾಕುವಿನ ಹಿಡಿಯನ್ನು ಮೊದಲು ನುಂಗಿದ್ದರಿಂದ ಜೀವಕ್ಕೆ ಅಪಾಯವಾಗಲಿಲ್ಲ' ಎಂದಿದ್ದಾರೆ ಸರ್ಜನ್.

ನಮ್ಮೂರಲ್ಲಿ ಹಿಡಿಯೇ ಇಲ್ಲದ ಚಾಕುವನ್ನೂ ನುಂಗಿ ನೀರು ಕುಡಿದ ಎಷ್ಟೊಂದು ನುಂಗಣ್ಣರಿದ್ದಾರೆ! ಅವರಿಗೆ ಯಾವ ಆಪರೇಷನ್ನೂ ಅಗತ್ಯವಿಲ್ಲ!




ದಕ್ಷಿಣ ಚೀನಾದ ಹೇಯುವನ್ ನಗರದಲ್ಲಿ ಈ ಇಲಿಯನ್ನು ಬಂಧಿಸಿ ಹಗ್ಗದಲ್ಲಿ ಕಟ್ಟಿ ನೇತು ಹಾಕಲಾಗಿದೆ. ಅದು ಮಾಡಿದ ತಪ್ಪು ಗೋದಾಮಿನಲ್ಲಿದ್ದ ಅಕ್ಕಿಯನ್ನು ಕದ್ದು ತಿಂದದ್ದು! ಇಲಿಯ ಕತ್ತಿಗೆ ಕಟ್ಟಿದ ಭಿತ್ತಿಪತ್ರದಲ್ಲಿ 'ದಯವಿಟ್ಟು ಕ್ಷಮಿಸಿ; ಇನ್ನು ಮುಂದೆ ಅಕ್ಕಿ ಕದ್ದು ತಿನ್ನುವುದಿಲ್ಲ' ಎಂದು ಬರೆಯಲಾಗಿದೆ!

ನಮ್ಮ ಲೋಕಾಯುಕ್ತರಿಗೆ ಈ ಐಡಿಯಾ ಕೊಟ್ಟರೆ, ಲಂಚ ತಿನ್ನುತ್ತಿರುವ ನಮ್ಮ ಸರ್ಕಾರಿ ನೌಕರರು ಏನಾದರೂ ಸುಧಾರಿಸಬಹುದೆ?



ಕೆಲವರಿಗೆ ಕೈ, ಮೈ ಮೇಲೆ ಬಣ್ಣದ ಹಚ್ಚೆ ಹಾಕಿಸಿಕೊಳ್ಳುವ ಹವ್ಯಾಸ. ಈ ಚಿತ್ರದಲ್ಲಿರುವ ಅಮೆರಿಕನ್ ದಂಪತಿಗೆ ಮೈತುಂಬ ಹಚ್ಚೆ ಹಾಕಿಸಿಕೊಳ್ಳುವ ಹುಚ್ಚು. ಈ ಜೋಡಿಯನ್ನು ನೋಡಿ– ತಾತನ ಮೈಮೇಲೆ ಶೇಕಡಾ 93.75 ರಷ್ಟು ಭಾಗವನ್ನು ಹಚ್ಚೆಯಿಂದ ಅಲಂಕರಿಸಿದ್ದರೆ, ಅಜ್ಜಿ ಶೇಕಡಾ 91.5ರಷ್ಟು ದೇಹದ ಭಾಗಗಳ ಮೇಲೆ ಹಚ್ಚೆ ಹಾಕಿಸಿಕೊಂಡಿದ್ದಾರೆ. ಹೊಸ ಗಿನ್ನೆಸ್ ದಾಖಲೆ ಇವರ ಹೆಸರಲ್ಲಿದೆಯಂತೆ!

ಹಚ್ಚೆಯೇನೋ ಚೆನ್ನಾಗಿದೆ. ಸದ್ಯ ಉಚ್ಚೆ ಹೊಯ್ಯಲಾದರೂ ಸ್ವಲ್ಪ ಜಾಗ ಬಿಟ್ಟಿದ್ದಾರಲ್ಲ... ಅನ್ನಬಹುದೆ?

ಸ್ಟೀವ್ ಜೆನ್‌ಕಿನ್ಸ್ ಎಂಬಾತ ತನ್ನ ಪುಟ್ಟ ನಾಯಿಮರಿಗಳ ಜತೆ ಆಟವಾಡಲು ಇರಲಿ ಎಂದು ಆರು ವಾರ ವಯಸ್ಸಿನ ಪುಟ್ಟ ಹಂದಿಮರಿಯೊಂದನ್ನು ಮನೆಗೆ ತಂದ. ಈಸ್ತರ್ ಎಂದು ಹೆಸರಿಟ್ಟ. ಹೆಚ್ಚೆಂದರೆ 31 ಕೆ.ಜಿ ತೂಕ ಹೆಚ್ಚಿಸಿಕೊಳ್ಳಬಹುದಾಗಿದ್ದ ಈಸ್ತರ್ ಎಷ್ಟು ಮುದ್ದಿನಿಂದ ಬೆಳೆಯಿತೆಂದರೆ ಈಗ ಐದು ವರ್ಷಗಳ ಬಳಿಕ ಅದರ ತೂಕ 294 ಕೆ.ಜಿ ಗೆ ಹೆಚ್ಚಿದೆಯಂತೆ! ಪ್ರತಿದಿನ 2500 ರೂಪಾಯಿ ಮೌಲ್ಯದ ಆಹಾರ ಧಾನ್ಯ ಮತ್ತು ತರಕಾರಿಗಳನ್ನು ಇದು ತಿನ್ನುತ್ತಿದೆಯಂತೆ.

ಜೀವನವೇ 'ಭಾರ'ವಾಗಿದೆ ಎಂದು ಸ್ಟೀವ್ ಬೇಜಾರು ಮಾಡಿಕೊಂಡಿಲ್ಲ! ಏಕೆಂದರೆ ಈ ಹಂದಿಗೆ ಇಂಟರ್‌ನೆಟ್‌ನಲ್ಲಿ ಈಗಾಗಲೆ 10 ಲಕ್ಷ ಫ್ಯಾನ್‌ಗಳಿದ್ದಾರಂತೆ. ಹಂದಿ ಜತೆ ಸ್ಟೀವ್ ತನ್ನ ಫೋಟೊವನ್ನೂ 'ಅಪ್‌ಲೋಡ್' ಮಾಡುತ್ತಾನೆ!



ಥಾಣೆಯ ಛತ್ರಪತಿ ಶಿವಾಜಿ ಮಹಾರಾಜ್ ಆಸ್ಪತ್ರೆಯ ಶಸ್ತ್ರಚಿಕಿತ್ಸೆ ಕೊಠಡಿಯಲ್ಲಿ ಜಿರಲೆಗಳ ಕಾಟ! ವೈದ್ಯರು ಸರ್ಕಾರಕ್ಕೆ ಎಷ್ಟು ದೂರು ಕೊಟ್ಟರೂ ಪ್ರಯೋಜನವಾಗಲಿಲ್ಲ. ಕಳೆದ ವಾರ ಹೀಗೆ ಶಸ್ತ್ರಚಿಕಿತ್ಸೆ ನಡೆಸುತ್ತಿದ್ದಾಗಲೇ ಎರಡು ದೊಡ್ಡ ಜಿರಲೆಗಳು ಬೆಡ್ ಮೇಲೆ ಓಡಾಡಿದ್ದು ಕಾಣಿಸಿತು. ವೈದ್ಯರು ಆಪರೇಷನ್ ನಿಲ್ಲಿಸಿ ಮೊಬೈಲ್‌ನಲ್ಲಿ ಅದರ ಓಡಾಟವನ್ನು ವೀಡಿಯೊ ಮಾಡಿ ಅಂತರ್ಜಾಲಕ್ಕೆ ಏರಿಸಿದರು!

ರೋಗಿಯ ಆಪರೇಷನ್ ಫಲಿತಾಂಶ ಏನಾಯ್ತೋ ಗೊತ್ತಾಗಿಲ್ಲ. ಆದರೆ ಜಿರಲೆ ವೀಡಿಯೋ ಮಾತ್ರ ಇಂಟರ್‌ನೆಟ್‌ನಲ್ಲಿ ವೈರಲ್ ಆಗಿದೆ!